## 4

# ಕ್ರಿಸ್ತನ ಸಂಬಂಧ

## (ಯೋಹಾನ 15:1-11)

*ರೂಪಾಂತರವಾದ ಜೀವಿತವು ಕ್ರಿಸ್ತನೊಂದಿಗೆ ಐಕ್ಯವಾದ ಜೀವಿತದಲ್ಲಿ ನೆಲೆಯೂರಿದ್ದಾಗಿದೆ ...*

ನೀನು "ಪ್ರೇಂಚ ಸಂಬಂಧದ" ಬಗೆಗೆ ಕೇಳಿರಬಹುದು ಯೋಹಾನ 15:1-11 "ಕ್ರಿಸ್ತನ ಸಂಬಂಧ"ದ ಬಗೆಗೆ ಹೇಳುತ್ತದೆ. ಯೇಸು ದ್ರಾಕ್ಷೆ ಮತ್ತು ಅದರ ಕೊಂಬೆಗಳ ಬಗೆಗೆ ಮಾತನಾಡುವಾಗ, ಆತನು ನಾವು ಕ್ರಿಸ್ತನೊಂದಿಗೆ ಸಂಬಂಧಿಸಿದ್ದೇವೆ ಎಂದು ಒತ್ತಿ ಹೇಳುತ್ತಾನೆ. ನಮಗೆ ಆ ಸಂದೇಶದ ಅವಶ್ಯಕತೆಯು ಇದೆ.

ಕ್ರಿಸ್ತನೊಂದಿಗೆ ನಮ್ಮ ಸಂಬಂಧದ ಮಹತ್ವವನ್ನು ಒತ್ತಿಹೇಳುವಲ್ಲಿ ಚರ್ಚು ವಿಫಲವಾಗಿದೆ. ಅನೇಕ ವರ್ಷಗಳ ಹಿಂದೆ ಜೇಮ್ಸ್ ಹೇಗೆ ಬರೆದಿದ್ದರು:

> ಇದು ನನಗೆ ಗೋಚರಿಸಿದ್ದು. ಚರ್ಚು ಕ್ರಿಸ್ತೀಯ ವ್ಯಕ್ತಿಗೆ ದೊಡ್ಡ ಸಮರ್ಪಣೆಯೊಂದಿಗೆ ವಶವಾಗುವಾಗ ಅಥವಾ ಲೌಕೀಕತೆ ಮತ್ತು ಆತ್ಮೀಕತೆಯ ಉದಾಸೀನತೆಯ ವೃದ್ಧಿಯಾಗುವಿಕೆಯ ಅನಿವಾರ್ಯವಾದ ಪರಿಣಾಮದಲ್ಲಿ ತೊಂದರೆ ಪಡುವಿಕೆಯಲ್ಲಿ. ಕ್ರಿಸ್ತೀಯ ಜೀವಿತದ ಬಹುಕಾಲ ಇರಬಲ್ಲ ಬೈಬಲ್ ಅಜ್ಞಾಪಿಸಿರುವ ತತ್ವಗಳು ಯಾವುದೇ ಕ್ರಿಯಾಶೀಲತೆಯ ತೀವ್ರಗೊಳಿಸುವ ಒತ್ತಡದಲ್ಲಿ ಕ್ರಿಸ್ತನು ಕೇಂದ್ರವಾಗಿರುವಾಗ ಮಾತ್ರ ಇರುವುದಾಗಿದೆ. ಇದು ಕೇವಲ ನಿಜವಾಗಿ ಪಾಪವನ್ನು ದ್ವೇಷಿಸುವ ಆತ್ಮೀಕ ಅರಿವು, ಮತ್ತು ಕ್ರಿಸ್ತೀಯ ಸಮರ್ಪಣೆಯ ಹಾಗೂ ತ್ಯಾಗಗಳ ಸಾಮರ್ಥ್ಯವಿರುವಲ್ಲಿನ ಕ್ರಿಸ್ತೀಯ ಜೀವಿತದಲ್ಲಿ ಇರುವಾಗ ಮಾತ್ರ ರಕ್ಷಕನೊಂದಿಗೆ ಇರುವ ವೈಯಕ್ತಿಕ ಸಂಬಂಧದ ಪಾರಿಭಾಷೆಯಲ್ಲಿ ವ್ಯಾಖ್ಯಾನಿಸಲ್ಪಟ್ಟಿದೆ.

1951ರಲ್ಲಿ ರೂ ಫ್ರೋಟರ್ ಹೀಗೆ ಬರೆದರು.

> ... ಬೋಧಕರಾದ ನಾವು ಕ್ರಿಸ್ತನ ಸುವಾರ್ತೆಗಿಂತಲೂ ಹೆಚ್ಚಾಗಿ ಸುವಾರ್ತೆಗಳಲ್ಲಿನ ಯೇಸುವಿನ ಮೇಲೆ ಹೆಚ್ಚಿನ ಒತ್ತನ್ನು ಕೊಡುವವರಾಗಿರುತ್ತೇವೆ ... ಸಂಪೂರ್ಣವಾದ ದೇವರ ಸತ್ಯವು ಯೇಸುವಿನಲ್ಲಿ ಮತ್ತು ಯೇಸುವಿನ ಮೇಲೆ ಕೇಂದ್ರಿಕೃತವಾಗಿದೆ. ಕ್ರಿಸ್ತನು ನಿಶ್ಚಯನು ಎಂಬ ಜ್ಞಾನಕ್ಕೆ ಆ ಸತ್ಯದ ಕಾರ್ಯವು ಅವಶ್ಯವಾಗಿದೆ. ಆದರೆ ಕ್ರಿಸ್ತನ ಜೀವಿತವನ್ನು ಮತ್ತು ಲಕ್ಷಣವನ್ನು ನಮಗೋಸ್ಕರ ಸುವಾರ್ತೆಯುದ್ಧಕ್ಕೂ ದಾಖಲಿಸಿದಂತದ್ದು ನಿಶ್ಚಿತವಾಗಿಯೂ ಶ್ರೇಷ್ಟ ಅವಶ್ಯಕತೆಯಂತಿದೆ.[1]

ನಮ್ಮ ಧರ್ಮವು ಕೇವಲ ತಾತ್ವಿಕತೆಯ ವಿಷಯವಾಗಿಲ್ಲ. ಇದು ಕೇವಲ ಒಳ್ಳೆಯದನ್ನು ಮಾಡುವಂತದ್ದಲ್ಲ ಅಥವಾ ಇತರರಿಗೆ ಸಹಾಯಮಾಡುವಂತದ್ದು ಅಲ್ಲ. ಚರ್ಚಕಟ್ಟಡದಲ್ಲಿ ಸಂಪ್ರದಾಯಗಳನ್ನು ಪರಿಪಾಲಿಸುವುದರಲ್ಲಿ ಅಲ್ಲ. ನಿಮ್ಮ ಧರ್ಮದ ದೇವರನ್ನು ಸಂತುಷ್ಟಗೊಳಿಸಬೇಕಾದರೆ ಅದು ನಮ್ಮ ದೇವರೊಟ್ಟಿಗೆ ನಿಕಟ ಸಂಬಂಧದಲ್ಲಿ ಒಳಗೊಂಡಿರಬೇಕಾಗಿದೆ; ಕ್ರಿಸ್ತನು ಕ್ರೈಸ್ತತ್ವದ ಕೇಂದ್ರವೂ ಮತ್ತು ಪರಿಧಿಯೂ, ಆದಿಯೂ

ಮತ್ತು ಅಂತ್ಯವೂ, ಜನಕನೂ ಮತ್ತು ಕೊನೆಗಾಣಿಸುವವನೂ ಆಗಿದ್ದಾನೆ. ನಾವು ಆತನಿಗೆ ಹತ್ತಿರವಾಗಿ ಜೀವಿಸುವುದಾದರೆ, ನಮ್ಮ ಜೀವಿತದಲ್ಲಿ ಕ್ರಿಸ್ತನ ಪ್ರಜ್ಞೆಯೊಂದಿಗೆ ನಾವು ಇಲ್ಲದೇ ಇರುವಾಗ ನಮ್ಮ ನಿಜವಾದ ಧರ್ಮ ಏನಾಗಿರಬೇಕೋ ಆದಾಗಿರುವುದಿಲ್ಲ.

ಕ್ರಿಸ್ತನ ಸಮೀಪಕ್ಕೆ ಎಳೆಯಲು ಸಹಾಯಿಸಲು, ಕ್ರಿಸ್ತನ ಸಂಬಂಧದ ಮತುವರ್ಜಿಯ ಬಗೆಗೆ ಯೋಹಾನ 15:1-11 ಏನನ್ನು ಬೋಧಿಸುತ್ತದೆಯೋ ಅದನ್ನು ನಾವೀಗ ಗಮನಿಸೋಣ.

## ಪ್ರತಿಯೊಬ್ಬ ಕ್ರೈಸ್ತ ಮತ್ತು ಕ್ರಿಸ್ತನ ಮಧ್ಯದ ಹತ್ತಿರದ ಸಂಬಂಧ

ಕ್ರಿಸ್ತನು ಕ್ರೈಸ್ತನಿಗೆ ಎಷ್ಟು ಹತ್ತಿರಲ್ಲಿ ಇದ್ದಾನೆ? ದ್ರಾಕ್ಷೆಯ ಕೊಂಬೆಯು ದ್ರಾಕ್ಷೆಗೆ ಹತ್ತಿರವಿದ್ದ ಹಾಗೆಯೇ! ಯೇಸು "ನಾನೇ ನಿಜವಾದ ದ್ರಾಕ್ಷೆಬಳ್ಳಿ. ನನ್ನ ತಂದೆ ತೋಟಗಾರನು" (ಯೋಹಾನ 15:1) ಎಂದು ಹೇಳುವುದರ ಮೂಲಕ ಪ್ರಾರಂಭಿಸುತ್ತಾನೆ. ನಂತರ ಆತನು "ನಾನು ದ್ರಾಕ್ಷೆಬಳ್ಳಿ, ನೀವು ಕೊಂಬೆಗಳು" (ಯೋಹಾನ 15:5) ಎಂದು ಹೇಳುವುದರ ಮೂಲಕ ಪ್ರಾರಂಭಿಸುತ್ತಾನೆ. ನಂತರ ಆತನು "ನಾನು ದ್ರಾಕ್ಷೆಬಳ್ಳಿ," ಬಗೆಗೆ ಯೋಚಿಸಿರಿ; ಅವುಗಳು ದ್ರಾಕ್ಷಾ ಗೊಂಚಲಿಗೆ ಎಷ್ಟೊಂದು ಹತ್ತಿರವಾಗಿರುತ್ತವೆ? ಅವು ಎಷ್ಟು ಹತ್ತಿರವಾಗಿರುತ್ತವೆಂದರೆ ಅವುಗಳನ್ನು ಬೇರ್ಪಡಿಸುವದೂ ಕೂಡಾ ಅಸಾಧ್ಯ. ಅದೇ ರೀತಿಯಲ್ಲಿಯೇ ಕ್ರೈಸ್ತನು ಕ್ರಿಸ್ತನೊಂದಿಗೆ ಹತ್ತಿರದ ಸಂಬಂಧದಲ್ಲಿ ಇರುತ್ತಾನೆ!

ಹೊಸ ಒಡಂಬಡಿಕೆಯು ಅನೇಕ ಕಡೆಗಳಲ್ಲಿ ಆ ಹತ್ತಿರತೆಯ ಬಗ್ಗೆ ಒತ್ತಿ ಹೇಳಿದೆ. ನಾವು ಕ್ರೈಸ್ತರಾದಾಗ ನಾವು "ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದುತ್ತೇವೆ"; ಮತ್ತು ದೀಕ್ಷಾಸ್ನಾನದಲ್ಲಿ ನಾವು "ಆತನೊಂದಿಗೆ ಹೂಳಲ್ಪಡುತ್ತೇವೆ" ಮತ್ತು ಕ್ರಿಸ್ತನು ಮರಣದಿಂದ ಪುನರುತ್ಥಾನ ಹೊಂದಿದ ಹಾಗೆಯೇ "... ನಾವೂ ಕೂಡಾ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು" (ರೋಮಾಪುರ 6:3-5). ಪೌಲನೂ ಸಹ ನಾವು "ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದ್ದಾಗ" ನಾವೆಲ್ಲರೂ ನಮ್ಮನ್ನು "ಕ್ರಿಸ್ತನೊಂದಿಗೆ ಧರಿಸಿಕೊಳ್ಳುತ್ತೇವೆ" (ಗಲಾತ್ಯ 3:27) ಎಂದು ಹೇಳುತ್ತಾನೆ.

> ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನ ನನ್ನಲ್ಲಿ ಜೀವಿಸುತ್ತಾನೆ (ಗಲಾತ್ಯ 2:20).
>
> ನನಗಂತೂ ಬದುಕುವುದೇನೆಂದರೆ ಕ್ರಿಸ್ತನೇ (ಫಿಲಿಪ್ಪಿ 1:21).
>
> ನಾವು ಬದುಕಿದರೆ ಕರ್ತನಿಗಾಗಿ ಬದುಕುತ್ತೇವೆ; ಸತ್ತರೆ ಕರ್ತನಿಗಾಗಿ ಸಾಯುತ್ತೇವೆ; ಬದುಕಿದರೂ ಸತ್ತರೂ ನಾವು ಕರ್ತನವರೇ (ರೋಮಾಪುರ 14:8).
>
> ... (ನಮ್ಮ) ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟಿದೆ (ಕೊಲಸ್ಸೆ 3:3).
>
> ಕ್ರಿಸ್ತನು (ನಮ್ಮಲ್ಲಿದ್ದು) ಪ್ರಭಾವದ ನಿರೀಕ್ಷೆಗೆ ಆಧಾರ ಭೂತನಾಗಿರುವುದೇ (ಕೊಲಸ್ಸೆ 1:27).

ಈ ಹತ್ತಿರವಾಗುವಿಕೆಯ ಸತ್ಯವು ಒಂದು ವೈಯಕ್ತಿಕವಾದದ್ದು ಎಂಬುದು ಮೆಚ್ಚಿಕೊಳ್ಳಬೇಕಾದದ್ದೇ *ಪ್ರತಿಯೊಬ್ಬ ಕ್ರೈಸ್ತನೂ* ಒಂದೊಂದು ಕೊಂಬೆಯಾಗಿದ್ದಾನೆ! ಯೇಸು ಯೋಹಾನ 15:6ರಲ್ಲಿ ಏನು ಹೇಳಿದ್ದಾನೆ ಎಂಬುದನ್ನು ನೋಡಿರಿ: "ಯಾವನು ನನ್ನಲ್ಲಿ ನೆಲೆಗೊಂಡಿರುವುದಿಲ್ಲವೋ ಅವನು ಆ ಕೊಂಬೆಯಂತೆ ಹೊರಕ್ಕೆ ಬೀಸಾಡಿಸಲ್ಪಟ್ಟು ಒಣಗಿ ಹೋಗುವನು; ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ, ಅವು ಸುಟ್ಟು ಹೋಗುತ್ತವೆ." ಯಾವನಾದರೂ ಇದು ಮುಂಚೆ "ಆ ಕೊಂಬೆಯಂತೆ ..." ಎಂದಾಗುತ್ತದೆ. ಪ್ರತಿಯೊಬ್ಬರೂ ಕೊಂಬೆಗಳಂತಿದ್ದಾರೆ. ಕೊಂಬೆಗಳು, ಅಂದರೆ, ವ್ಯಕ್ತಿಗಳೇ ಎಂದಾಗಿದೆ

ಹೊರತು ಚರ್ಚಗಳಲ್ಲ. ಒಬ್ಬ ಕ್ರೈಸ್ತನಿಗೆ ಆತನು ಯಾವ ಚರ್ಚಿನ ಸದಸ್ಯೆ ಎಂದು ಪ್ರಶ್ನಿಸಲ್ಪಟ್ಟಿತು. "ಚರ್ಚ" ಎಂದಾತನು ಉತ್ತರಿಸಿದನು. ಪ್ರಶ್ನಿಸಿದಾತನು ಅಚ್ಚರಿಗೊಂಡನು ಮತ್ತೇ ಆತನಿಗೆ ಕೇಳಿದನು "ಆದರೆ ಯಾವ ಚರ್ಚ" ಎಂದು. "ಕೇವಲ ಚರ್ಚ" ಇಲ್ಲ, ಇಲ್ಲ ನೀನು ಸಾರ್ವತ್ರಿಕ ಚರ್ಚಿನ ಸದಸ್ಯ ಎಂದು ನನಗೆ ಗೊತ್ತು, ಆದರೆ ಚರ್ಚಿನ ಯಾವ ಶಾಖೆಯ ಸದಸ್ಯ ನೀನಾಗಿರುವಿ? ಆಗ ಆ ಕ್ರೈಸ್ತನು "ನಾನು ಯಾವ ಶಾಖೆಯ ಸದಸ್ಯನೂ ಅಲ್ಲ; ನಾನು ನನ್ನಷ್ಟಕ್ಕೆ ನಾನೇ ಎಲ್ಲ ಶಾಖೆಯಾಗಿದ್ದೇನೆ" ಎಂದು ಉತ್ತರಿಸಿದನು. ಇದು ಖಚಿತವಾಗಿ ಸತ್ಯ ವಾಗಿದೆ! ಪ್ರತಿಯೊಬ್ಬ ಕ್ರೈಸ್ತನೂ ತನ್ನಷ್ಟಕ್ಕೆ ತಾನೇ ಒಂದು ಶಾಖೆಯಾಗಿದ್ದಾನೆ!

ಆ ವಿಚಾರವು ಪ್ರಾಯೋಗಿಕವಾದ ವಿವಕ್ಷೆಯಾಗಿದೆ. ಇದರ ಅರ್ಥ ಕ್ರಿಸ್ತನೊಂದಿಗಿನ ಸಂಬಂಧವು ಸಭೆಯಾಗಿ ಆತುಕೊಂಡಿಲ್ಲ; ಆದರೆ ವ್ಯಕ್ತಿಗತವಾಗಿ ಕ್ರಿಸ್ತನಲ್ಲಿ ಅಂತಿಕೊಂಡಿದ್ದೇವೆ. ನೀವು ಪಾದ್ರಿಯಾಗಿ ಅಭಿಷೇಕ ಹೊಂದುವ ಮೂಲಕ, ಅಥವಾ ಸಂತರಂತಹ ಮಧ್ಯವರ್ತಿಗಳ ಮೂಲಕ ಕ್ರಿಸ್ತನೆಡೆಗೆ ಹೋಗುವ ಅವಶ್ಯಕತೆಯು ಇಲ್ಲ. ಕ್ರಿಸ್ತನನ್ನು ತಲುಪಲು ಪಾದ್ರಿಗಳೊಡನೆ ಒಳ್ಳೆಯ ಸಂಬಂಧವನ್ನು ಹೊಂದಿರುವ ಅವಶ್ಯಕತೆಯು ಇಲ್ಲ. ಕ್ರಿಸ್ತನೊಡನೆಯ ನಿನ್ನ ಸಂಬಂಧವು ನನ್ನ ಮೇಲೆ, ಹಿರಿಯರ ಮೇಲೆ, ಅಥವಾ ಯಾರೊಬ್ಬರ ಮೇಲೂ ಆತುಕೊಂಡಿಲ್ಲ. ಅದು ನಿನ್ನ ಮೇಲೆಯೇ ಆತುಕೊಂಡಿದೆ.

## ಕ್ರಿಸ್ತನೊಂದಿಗಿನ ಹತ್ತಿರದ ಸಂಬಂಧವನ್ನು ಕಾದುಕೊಳ್ಳುವುದರ ಅವಶ್ಯಕತೆ

ಕ್ರಿಸ್ತನು ಮಧ್ಯವರ್ತಿಯಾಗಿರುವಿಕೆಯ ಹತ್ತಿರದ ಸಂಬಂಧವನ್ನು ಈ ಪರಿಚ್ಛೇದವು ಕಠಿಣವಾಗಿ ಹೇಳುವುದಾಗಿದ್ದು. "ಯಾವನು ನನ್ನಲ್ಲಿ ನೆಲೆಗೊಂಡಿರುವುದಿಲ್ಲವೋ ಅವನು ಆ ಕೊಂಬೆಯಂತೆ ಹೊರಕ್ಕೆ ಬೀಸಾಡಿಸಲ್ಪಟ್ಟು ಒಣಗಿ ಹೋಗುವನು; ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲಿಲ ಹಾಕುತ್ತಾರೆ, ಅವು ಸುಟ್ಟು ಹೋಗುತ್ತವೆ" (ಯೋಹಾನ 15:6). ಆದ್ದರಿಂದ ಇದು, ಅಸಂಬಂಧವನ್ನು ಕಾದುಕೊಳ್ಳುವ ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ. ಆತನಲ್ಲಿ ನೆಲೆಗೊಂಡಿರುವದು ನಮಗೆ ಅವಶ್ಯವಾಗಿರುವುದನ್ನು ಕ್ರಿಸ್ತನು ತಿರುಗಿ ತಿರುಗಿ ಹೇಳುತ್ತಾನೆ:

> ನನ್ನಲ್ಲಿ ನೆಲೆಗೊಂಡಿರು ... (ಯೋಹಾನ 15:4).
>
> ನಾನು ದ್ರಾಕ್ಷೆಬಳ್ಳಿ, ನೀವು ಕೊಂಬೆಗಳು ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು (ಯೋಹಾನ 15:5).
>
> ಯಾವನು ನನ್ನಲ್ಲಿ ನೆಲೆಗೊಂಡಿರುವುದಿಲ್ಲವೋ ಅವನು ಆ ಕೊಂಬೆಯಂತೆ ಹೊರಕ್ಕೆ ಬೀಸಾಡಿಸಲ್ಪಟ್ಟು ... (ಯೋಹಾನ 15:6).
>
> ನೀವು ನನ್ನಲ್ಲಿಯೂ ನನ್ನ ವಾಕ್ಯಗಳಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ನಿಮಗೆ ದೊರೆಯುವದು (ಯೋಹಾನ 15:7).
>
> ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದು ... ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ (ಯೋಹಾನ 15:10).

ಕ್ರಿಸ್ತನಲ್ಲಿ ನೆಲೆಗೊಂಡಿರಿ! ಅದೊಂದು ಆಜ್ಞೆಯಾಗಿದೆ! ಇದು ನಾವು ಕ್ರಿಸ್ತನ ಆತುಕೊಳ್ಳುವಿಕೆಗೆ ಹತ್ತಿರವಾಗಿದ್ದೇವೆಯೋ, ಕ್ರಿಸ್ತನ ಮೇಲಲೇಲವೂ ಅಥವಾ ನಮ್ಮ ಮೇಲೆಯೋ ಎಂದು ಹೇಳುವುದಾಗಿದೆ! ನಾವು ಆತ್ಮೀಕರು ಎಂದು ಅನ್ನಿಸದೇ ಹೋದಲ್ಲಿ, ನಾವು ಕ್ರಿಸ್ತನಿಂದ ಬಲು ದೂರವಿದ್ದೇವೆ ಎನ್ನಿಸಿದ್ದರೆ, ಇದು ಕ್ರಿಸ್ತನಿಗೆ ಬೇಕಾದ ಮಾರ್ಗಕ್ಕೆ

ಕಾರಣವಾಗಿಲ್ಲ ಎಂದು ನಮಗೆ ಖಚಿತವಾಗುತ್ತದೆ! ಬದಲಾಗಿ ಇದು ನಾವು ಆತನಲ್ಲಿ ಉಳಿಯಲು, ನೆಲೆಗೊಳ್ಳುವುದರಲ್ಲಿ ವಿಫಲವಾಗಿರುವುದೇ ಆಗಿದೆ.

ಆದರೆ ದೇವರೊಂದಿಗೆ ಹತ್ತಿರದ ಸಂಬಂಧವನ್ನು ಕಾದುಕೊಳ್ಳುವುದು ಹೇಗೆ? ಅನೇಕ ಮಾರ್ಗಗಳು ಸೂಚಿಸಲ್ಪಟ್ಟಿವೆ:

*ಕ್ರಿಸ್ತನ ಬಗೆಗೆ ಓದಿರಿ* ಮತ್ತು ನೀವು ಓದಿದುರ ಮೇಲೆ ಧ್ಯಾನಿಸಿರಿ. ಸುವಾರ್ತೆಯನ್ನು ಕ್ರಮವಾಗಿ ಓದರಿ. ಮತ್ತು ಕ್ರಿಸ್ತನ ಪ್ರೀತಿಯನ್ನು ನೀವು ಹೆಚ್ಚು ಹೆಚ್ಚಾಗಿ ಕಲಿಯುವಿರಿ.

*ಚರ್ಚಿನ ಆರಾಧನಾ ಸೇವೆಯಲ್ಲಿ ಮತ್ತು ನಿಮ್ಮ ಸ್ವಂತದ ಧ್ಯಾನದಲ್ಲಿ ಕ್ರಿಸ್ತನನ್ನು ಸ್ತುತಿಸಿರಿ.* ಸ್ತುತಿಯು ಆರಾಧನೆಯ ಬಾಹ್ಯ ಅಭಿವ್ಯಕ್ತಿಯಾಗಿದೆ ಮತ್ತು ನಾವು ಯಾರನ್ನು ಆರಾಧಿಸುತ್ತೀವೋ ಅವರ ಹಾಗೇ ನಾವು ಪರಿವರ್ತಿತವಾಗಬಹುದು.

*ನೀವು ಎಲ್ಲಿ ಕ್ರಿಸ್ತನ ಬಗೆಗೆ ಕಲಿತಿರುತ್ತೀರೋ ಅಂದರೆ ಭಾನುವಾರ ಪಾಠಶಾಲೆ,* ಭಾನುವಾರ ಮುಂಜಾನೆಯ ಆರಾಧನೆ, ಭಾನುವಾರ ಸಂಜೆಯ ಆರಾಧನೆ, ಬುಧವಾರ ಸಂಜೆಯ ಆರಾಧನೆಯ ಸೇವೆಗಳಲ್ಲಿನ ಆರಾಧನೆಗಳಲ್ಲಿ ಭಾಗಿಯಾಗಿರಿ ಕೆಲವರು ಕ್ರಿಸ್ತನಿಗೆ ಹತ್ತಿರ ಹತ್ತಿರವಾಗಿ ಎಳೆಯಲು ಬಯಸುವುದನ್ನು ಆದರೆ ಅದೇ ಸಮಯದಲ್ಲಿ ಕ್ರಿಸ್ತನನನ್ನು ಬೋಧಿಸುವಲ್ಲಿ ಮತ್ತು ಆತನ ವಾಕ್ಯವನ್ನು ಕಲಿಸುವಲ್ಲಿನ ಕೂಟಗಳಲ್ಲಿ ತಾವೇ ಉದ್ದೇಶ ಪೂರ್ವಕವಾಗಿ ಹಾಜಾರಾಗದಿರುವುದನ್ನು ನಾನು ಕಲ್ಪಿಸಿಕೊಳ್ಳಲಾರೆನು.

*ಕ್ರಿಸ್ತನ ಹಾಗಿರುವುದಕ್ಕೆ ಪ್ರಯತ್ನಿಸುವವರ ಜೊತೆ ನೀವೂ ಇರಿ.* ಅವರ ಉದಾಹರಣೆಯು ನಿನ್ನ ಅಳಿಸಿಹಾಕುವದು. ಕ್ರಿಸ್ತನ ಮಾರ್ಗದಲ್ಲಿ ನಡೆಯುವುದನ್ನು ತನ್ನ ಜೀವಮಾನದುದ್ದಕ್ಕೂ ನಡೆಸಿಕೊಳ್ಳುವವನ ಜೊತೆ ನಿನ್ನ ಹೆಚ್ಚಿನ ಸಮಯವನ್ನು ಕಳೆದಿದ್ದಾದರೆ ನೀನು ಅವರ ಉದಾಹರಣೆಯನ್ನು ಅನುಸರಿಸುವತ್ತ ವಾಲುವವರಾಗಿರುವಿರಿ. "ದುಸ್ಸಹವಾಸವು ಸದಾಚಾರವನ್ನು ಕೆಡಿಸುತ್ತದೆ" (1 ಕೊರಿಂಥ 15:33) ಎಂಬುದು ಇಂದಿಗೂ ನಿಜವಾದುದ್ದು ಆಗಿದೆ.

ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿಯಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು (1 ಪೇತ್ರ 2:21). ಆತನ *ಹೆಜ್ಜೆಯಲ್ಲಿ* ಎಂಬ ಚಾರ್ಲ್ಸ್ ಶೆಲ್ಡಾನ್‌ನ ಪುಸ್ತಕದಲ್ಲಿನ, ಮೊದಲು ಏನನ್ನೂ ಕೇಳದೇ "ಯೇಸು ಏನು ಮಾಡಿದನು?" ಎಂದು ಪ್ರಶ್ನಿಸುವ ಜನರಂತೆ ನೀನು ಎಂದಿಗೂ ಪರಿಗಣಿಸಲ್ಪಡಬೇಡ.

*ಕ್ರಿಸ್ತನ ಬಗೆಗೆ ಯೋಚಿಸು.* "ಇಡೀ ದಿನದಲ್ಲಿ ನೀನು ಏನು ಆಗಿರಬೇಕೆಂದು ಆಲೋಚಿಸುತ್ತಿಯೋ ಅದೇ ನಿನಾಗಿರುತ್ತಿ" ಎಂಬುದಾಗಿ ಯಶಸ್ವಿ ಜೀವನ ನಡೆಸುವುದರ ಬಗೆಗೆ ಕಲಿಸುವ ಜನರು ಹೀಗೆ ಹೇಳುತ್ತಾರೆ. ನೀವು ಕ್ರಿಸ್ತನ ಹಾಗೆಯೇ ಇರುವುದಾದರೆ ಮತ್ತು ಆತನಿಗೆ ಹತ್ತಿರವಾಗಿ ಜೀವಿಸುವುದಾದರೆ, ದಿನವುದ್ದಕ್ಕೂ ಆತನ ಬಗೆಗೆ ಯೋಚಿಸುವುದು ನಮಗೆ ಅವಶ್ಯವಾಗಿದೆ.

ಇದಕ್ಕೆ ಜೊತೆಯಾಗಿ, ನಿರ್ಧಿಷ್ಟವಾದ ಈ ವಿಷಯದಲ್ಲಿ ಎರಡು ಅವಶ್ಯಕತೆಗಳನ್ನು ಮಾಡುವವನಾಗಿದ್ದಾನೆ:

ಮೊದಲನೆಯದಾಗಿ, ಕ್ರಿಸ್ತನ ವಾಕ್ಯಗಳಿಗೆ ಅಧೀನವಾಗುವದು ನಮಗೆ ಅವಶ್ಯವಾಗಿದೆ: "ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ" (ಯೋಹಾನ 15:3) ಎಂಬ ಕ್ರಿಸ್ತನ ಮಾತುಗಳ ಮೂಲಕ ಪ್ರಾರಂಭಿಕವಾಗಿಯೇ ನಾವು ಶುದ್ಧರಾಗಿ ಮಾಡಲ್ಪಟ್ಟಿದ್ದೇವೆ. ಕ್ರಿಸ್ತನಿಗೆ ಹತ್ತಿರದವರಾಗಿ ಉಳಿಯುವುದರ ಬಗೆಗೆ ಯೋಚಿಸುವುದಾದರೆ, ನಾವು ಆತನಿಗೆ ಸಂಗತರಾಗಬೇಕು. ನಾವು ಫಲಗಳನ್ನು ಕೊಡುವ ಮುನ್ನ, ನಾವು ಜೀವಿತದ ಅನುಭವಗಳನ್ನು ಹೊಂದಿರಬೇಕು. ಕ್ರಿಸ್ತನೆಡೆಗೆ ನಂಬಿಕೆ ಮತ್ತು ವಿಧೇಯತೆಯಿಂದ ತಿರುಗಿಸುವ ಮೂಲಕ ಆತನಲ್ಲಿ ನಂಬಿಕೆಯಿಡುವ, ನಮ್ಮ ಪಾಪಗಳಿಂದ ತಿರುಗಿಕೊಳ್ಳುವ, ಆತನ ಹೆಸರಿನ ಮೇಲೆ ಪಶ್ಚಾತ್ತಾಪಪಡುವ ಮೂಲಕ, ಮತ್ತು ಆತನ

ವಾಕ್ಯದಲ್ಲಿ ನೆಲೆಗೊಳ್ಳುವ ಮೂಲಕ ನಾವು ಆ ಸಂಬಂಧವನ್ನು ಹೊಂದಿಕೊಳ್ಳಬಹುದು. ಆದರೆ ಆತನ ವಾಕ್ಯದ ಮೂಲಕ, ಮತ್ತು ಆತನ ವಾಕ್ಯದಲ್ಲಿ ನೆಲೆಗೊಳ್ಳವ ಮೂಲಕ ತಿರುಗಿ ಉಳಿದುಕೊಳ್ಳುವುದರಿಂದ ಅಥವಾ ನಮ್ಮಲ್ಲಿ ಕ್ರಿಸ್ತನ ವಾಕ್ಯವು ನೆಲೆಗೊಂಡಿರುವುದನ್ನು ತಿಳಿಯುವ ಮೂಲಕವೇ ಮಾತ್ರ ನಾವು ಆತನಲ್ಲಿಯೇ ಐಕ್ಯವಾಗಿರುವುದಿಲ್ಲ. "ನೀವು ನನ್ನಲ್ಲಿಯೂ *ನನ್ನ ವಾಕ್ಯಗಳಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ. ಅದು ನಿಮಗೆ ದೊರೆಯುವದು*" (ಯೋಹಾನ 15:7; ಒತ್ತಿ ಹೇಳಿದ್ದು ನನ್ನದು) ಎಂದು ಯೇಸು ಹೇಳುತ್ತಾನೆ. *ದೇವರ ವಾಕ್ಯವನ್ನು ಅರಿತು ಕೊಳ್ಳದೇ ಮತ್ತು ಅದಕ್ಕೆ ವಿಧೇಯರಾಗದೇ ಇದ್ದಲ್ಲಿ ಕ್ರಿಸ್ತನಲ್ಲಿ ನಿಜವಾದ ಐಕ್ಯತೆಯನ್ನು ನಿಜ ಆತ್ಮೀಕತೆಯೂ ಹೊಂದುವದು ಸಾಧ್ಯವಿಲ್ಲ.*

ಎರಡನೆಯದಾಗಿ ನಮಗೆ ಕ್ರಿಸ್ತನ ಆಜ್ಞೆಗಳನ್ನು ಇಟ್ಟುಕೊಳ್ಳುವ ಅವಶ್ಯಕತೆಯು ಇರುವ ಪರಿಚ್ಛೇದವು ಹತ್ತಿರವಾಗಿ ಸಂಬಂಧಿಸಿದಂತಹದ್ದಾಗಿದೆ: "ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ" (ಯೋಹಾನ 15:10). ನೀನು ಕ್ರಿಸ್ತನಿಗೆ ಹತ್ತಿರದವನಾಗಿ ಇರಲು ಬಯಸುವವನಾದದ್ದಾದರೆ, ಯೇಸು ಹೇಳಿದಂತೆ ಮಾಡುವದು ಅವಶ್ಯವಾಗಿಯೂ ನಿಶ್ಚಿತವಾದದ್ದು ಆಗಿದೆ.

ಕ್ರಿಸ್ತನಿಗೆ ತಾವು ಬಲು ಸಮೀಪಸ್ಥರು ಎಂಬ ಭಾವನೆ ಹೊಂದಿರುವಂತಹ, ನಿಯತವಾಗಿ ತಮ್ಮ ರಕ್ಷಣೆಯ ಸಾಕ್ಷಿಯನ್ನು ಹೇಳುವಂತಹ ಕೆಲವರು ತಮ್ಮ ಧರ್ಮದಲ್ಲಿ ಶ್ರದ್ಧೆಯುಳ್ಳವರಾಗಿರುತ್ತಾರೆ ಎಂದು ನಾವೆಲ್ಲರೂ ಬಲ್ಲೆವು. ಅವರ ಆಸಕ್ತಿ ಮತ್ತು ಉತ್ಸಾಹವನ್ನು ಮೆಚ್ಚಿಕೊಳ್ಳುವಾಗ, ಅವರು ನಿಜವಾಗಿ ಕರ್ತನ ಆಜ್ಞೆಗಳನ್ನು ಕೈಕೊಳ್ಳುವ ಮೂಲಕ ಆತನಿಗೆ ವಿಧೇಯರಾಗಿರುತ್ತಾರೋ? ಎಂದು ನಮಗೆ ಆಶ್ಚರ್ಯವುಂಟಾಗುತ್ತದೆ. ಅವರು ಬಹುಶಃ ಮತ್ತಾಯ 7:21-23ರಲ್ಲಿ ಯೇಸು ಹೇಳಿದ ಜನರಂತೆ ಇರಬಹುದು:

> ನನ್ನನ್ನು ಸ್ವಾಮೀ, ಸ್ವಾಮೀ, ಅನ್ನುವವರೆಲ್ಲರೂ ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಿಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕ ರಾಜ್ಯವನ್ನು ಸೇರುವನು. ಸ್ವಾಮೀ, ಸ್ವಾಮೀ, ನಿನ್ನ ಹೆಸರಿನ ಮೇಲೆ ನಾವು ಬೋಧನೆಗಳನ್ನು ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. ಆಗ ನಾನು ಅವರಿಗೆ ನಾನೆಂದೂ ನಿಮ್ಮ ಗುರುತನ್ನು ಕಾಣೆನು; ಧರ್ಮವನ್ನು ಮೀರಿನಡೆಯುವವರೇ, ನನ್ನಿಂದ ತೊಲಗಿಹೋಗಿರಿ ಎಂದು ಎಲ್ಲರ ಮುಂದೆ ಹೇಳುವೆನು.

ಕ್ರಿಸ್ತನಿಗೆ ಹತ್ತಿರವಾಗಿರುವುದರಿಂದ ಯಾವ ಉದ್ದೇಶವನ್ನು ನಾವು ಹೊಂದಿದ್ದೇವೆ? ನಿಶ್ಚಿತವಾಗಿ, ಕ್ರಿಸ್ತನಿಗೆ ಹತ್ತಿರವಾಗಿ ಇರುವದು ನಮಗೆ ಅವಶ್ಯವಾಗಿದೆ ಯಾಕೆಂದರೆ ವಿಫಲತೆ ಪರಿಣಾಮವು ಇದಕ್ಕೆ ಸಂಬಂಧಿಸಿರುತ್ತದೆ. ನಾವು ಆತನಲ್ಲಿ ನೆಲೆಗೊಳ್ಳದೇ ಹೋದರೆ: (1) ನಾವು ಫಲವನ್ನು ಕೊಡಲಾರೆವು: "ನನ್ನಲ್ಲಿ ನೆಲೆಗೊಂಡಿರ್ರಿ ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ" (ಯೋಹಾನ 15:4). (2) ನಾವು ಯಾವುದನ್ನೂ ಪರಿಪೂರ್ಣಗೊಳಿಸಲಾರೆವು "ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ" (ಯೋಹಾನ 15:5). (3) ನಾವು ತೆಗೆದುಹಾಕಲ್ಪಡುತ್ತೇವೆ. "ಯಾವನ ನನ್ನಲ್ಲಿ ನೆಲೆಗೊಂಡಿರುವುದಿಲ್ಲವೋ ಅವನು ಆ ಕೊಂಬೆಯಂತೆ ಹೊರಕ್ಕೆ ಬೀಸಾಡಿಸಲ್ಪಟ್ಟು ..." (ಯೋಹಾನ 15:6).

# ಕ್ರಿಸ್ತನೊಂದಿಗಿನ ಹತ್ತಿರದ ಸಂಬಂಧದ ಉದ್ದೇಶ

ನಾವು ಕ್ರಿಸ್ತನಿಗೆ ಯಾಕೆ ಹತ್ತಿರದವರಾಗಿದ್ದೇವೆ? ನಮ್ಮ ಹತ್ತಿರತೆಯನ್ನು ನಮ್ಮ ಆತ್ಮೀಕತೆಯನ್ನು ಕೊಚ್ಚಿಕೊಳ್ಳ ಉದ್ದೇಶದಿಂದಲೇ? ಆ ಸಂಬಂಧದಲ್ಲಿ ಅದನ್ನು ಹಂಚಿ ಕೊಳ್ಳುವ ಯಾವುದೇ ಉದ್ದೇಶವನ್ನು ಹೊಂದದೇ ಬೀಗುವದೇ? ಇಲ್ಲ. ನಮ್ಮ ಸಂಬಂಧದ ಉದ್ದೇಶವು ಫಲವನ್ನು ಕೊಡುವದು ಎಂದು ಈ ಪರಿಚ್ಛೇದವು ನಮಗೆ ನಿಶ್ಚಿತವಾಗಿ ಬೋಧಿಸುವುದಾಗಿದೆ! ದ್ರಾಕ್ಷೆಗೊಂಚಲಿನ ಕೊಂಬೆಯಾಗಿರುವುದರ ಅಂಶವೇನು? ದ್ರಾಕ್ಷೆಯನ್ನು ಕೊಡುವದು! ಹತ್ತಿಯು ದೇಟಿಗೆ ಹತ್ತಿಕೊಂಡು ಹತ್ತಿಯನ್ನು ಉತ್ಪಾದಿಸುವ ಹಾಗೆ ಮತ್ತು ಪೀಚಮರದ ಕೊಂಬೆಯಾಗಿದ್ದು ಕೊಂಡು ಪೀಚಹಣ್ಣನ್ನು ಕೊಡುವ ಹಾಗೆ ಇದು ಸಂಬಂಧಿಸಿರುವುದಾಗಿದೆ. ನಾವು ಫಲವನ್ನು ಕೊಡದೇ ಹೋದರೆ, ನಾವು ನಮ್ಮ ಉದ್ದೇಶವನ್ನು ಸಂಪೂರ್ಣಗೊಳಿಸ ಲಾರೆವು.

ಇದು ಹೇಳಲು ಬಯಸುವುದಕ್ಕಿಂತ ಹೆಚ್ಚಿನದನ್ನು ಪರಿಚ್ಛೇದವು ಹೇಳುವುದಾಗಿದೆ, ಆದರೆ ಸ್ವಾಭಾವಿಕ ಜಗತ್ತಿನಲ್ಲಿ ದ್ರಾಕ್ಷೆ ಮತ್ತು ಕೊಂಬೆಗಳು ಮಧ್ಯ ಅನ್ಯೋನ್ಯ ಸಂಬಂಧವಿರುವ ಸಾಮಾನ್ಯ ಅಂಶವನ್ನು ನಾವಿಲ್ಲಿ ಕಾಣುತ್ತೇವೆ. ದ್ರಾಕ್ಷೆಬಳ್ಳಿಯು ಕೊಂಬೆಗಳಿಗೆ ಪೋಷಣಾ ಶಕ್ತಿಯನ್ನು ಮತ್ತು ಪಾಲನೆಯನ್ನು - ನೀರು ಮತ್ತು ಪೋಷಾಕಾಂಶವನ್ನು ಒದಗಿಸುವುದಾಗಿದೆ. ಆದರೆ ದ್ರಾಕ್ಷಾಬಳ್ಳಿಯು ತಂತಾನೇ ಫಲವನ್ನು ಬಿಡಲಾರದು. ನಾವು ಸಸ್ಯದ ಉದ್ದೇಶವನ್ನು ಗಮನಿಸಿದ್ದೇ ಆದರೆ, ಕೊಂಬೆಗಳಿಲ್ಲದೇ ಅದರ ಉದ್ದೇಶವು ಸಂಪೂರ್ಣಗೊಳ್ಳಲಾರದು. ಮತ್ತು ಅದರಂತೆಯೇ ಆತ್ಮೀಕವಾಗಿ ದ್ರಾಕ್ಷೆಬಳ್ಳಿ ಹಾಗೂ ಕೊಂಬೆಗಳ ಜೊತೆ (1) ಅಲ್ಲಿ ದ್ರಾಕ್ಷಾಬಳ್ಳಿಯಿಂದ ಪೋಷಣಾಶಕ್ತಿಯು ಇದೆ. (2) ಆದರೆ ನಮ್ಮನ್ನು ಬಿಟ್ಟು ಯೇಸುವಿಗೆ ತಾನು ಬಯಸಿದ ಇದೆಲ್ಲವನ್ನೂ ಸಂಪೂರ್ಣಗೊಳಿಸಲು ಸಾಧ್ಯವಿಲ್ಲ. ಉದಾಹರಣೆಗೆ, ಆತನು ಕಳೆದು ಹೋದದ್ದನ್ನು ಹುಡುಕಬಲ್ಲನು ಮತ್ತು ರಕ್ಷಿಸಬಲ್ಲನು, ಆದರೆ ಆತನು ನಮ್ಮ ಸಹಕಾರವಿಲ್ಲದೇ, ನಮ್ಮ ಸುವಾರ್ತಾ ಸಾರುವಿಕೆಯಿಲ್ಲದೇ ಕಳೆದುಹೋದುದನ್ನು ರಕ್ಷಿಸಲಾರನು.

ಫಲವನ್ನು ಬಿಡುವುದು ನಮ್ಮ ಜವಾಬ್ದಾರಿಯಾಗಿದ್ದರಿಂದ, "ಯಾವ ಫಲವನ್ನು ನಾವು ಕೊಡಬೇಕು?" ಎಂದು ನಾವು ಕೇಳಬಹುದು. ಅದಕ್ಕಾಗಿ ಅನೇಕ ಉತ್ತರದ ಸಾಧ್ಯತೆಗಳು ಇವೆ. ಹೊಸ ಒಡಂಬಡಿಕೆಯು "ಆತ್ಮೀಕ ಫಲದ" (ಗಲಾತ್ಯ 5:22, 23), "ಬೆಳಕಿ ಫಲವನ್ನು" (ಎಫೆಸ 5:9), ಮತ್ತು "ನೀತಿವಂತಿಕೆಯ ಫಲವನ್ನು" (ಫಿಲಿಪ್ಪಿ 1:11; ಯಾಕೋಬ 3:18) ಬಗೆಗೆ ಮಾತನಾಡುತ್ತದೆ.

ಯೋಹಾನ 15ರ ಇನ್ನೊಂದು ವ್ಯಾಖ್ಯಾನವೆಂದರೆ: ನಾವು ನಮ್ಮಹಾಗೆ ಇತರರನ್ನೂ ಕೂಡಾ ಸಹಿಸಿಕೊಳ್ಳಬೇಕು. ಇತರರನ್ನೂಕೂಡಾ ಕ್ರಿಸ್ತನಿಗಾಗಿ ಫಲಕೊಡಲು ಪರಿವರ್ತಿಸುವುದನ್ನು ಸೂಚಿಸುವ ಪರಿಚ್ಛೇದಗಳೂ ಇಲ್ಲಿವೆ. (ನೋಡಿರಿ ರೋಮಾಪುರ 1:13; ಫಿಲಿಪ್ಪಿ 1:22; 4:17.) ಒಂದು ವೇಳೆ ನಾವು ಒಬ್ಬರನ್ನು ಕ್ರಿಸ್ತನಿಗಾಗಿ ಪರಿವರ್ತಿಸುವ ಮೂಲಕ ಫಲವನ್ನು ಕೊಡದೇ ಹೋದರೆ ಆ ಕೊಂಬೆಯಂತೆ ಹೊರಕ್ಕೆ ಬೀಸಾಡಿಲ್ಪಡುವೆವು ಮತ್ತು "ಬೆಂಕಿಯಲ್ಲಿ ಹಾಕಲ್ಪಡುವೆವು" (ಯೋಹಾನ 15:6) ಎಂದು ನಿಶ್ಚಿತವಾಗಿ ಇಂತಹ ಪರಿಚ್ಛೇದಗಳನ್ನು ಅಕ್ಷರ ಸಹ ಅನ್ವಯಿಸಿಕೊಳ್ಳಲಾರೆವು. ಇನ್ನೂ ನಮ್ಮ ಸಾಮರ್ಥಕ್ಕೆ ತಕ್ಕ ಹಾಗೆ, ನಾವು ಹೊಂದುವ ಅವಕಾಶಗಳಿಂದ ಇತರರನ್ನು ಕ್ರಿಸ್ತನೆಡೆಗೆ ತರಲು ನಮಗಾದಷ್ಟು ಪ್ರಯತ್ನಿಸುವದು ನಮಗೆ ಅವಶ್ಯವಿದೆ. ಕರ್ತನಿಗೆ ನಾವು ಕೇವಲ "ಒಳ್ಳೆಯ" ವರಾಗುವದು ಬೇಕಿಲ್ಲ, ನಾವು "ಒಳ್ಳೆಯ" ವರಾಗಿರಬಹುದು, ಆದರೆ "ಕೆಲಸಕ್ಕೆ ಬಾರದೆ ಇರುವ ಸಾಧ್ಯತೆಯು ಉಂಟು." ಕ್ರಿಸ್ತನಲ್ಲಿ ನೆಲೆಗೊಂಡಿರುವುದರ ಪರಿಣಾಮವು ನಮಗೆ ಮತ್ತು ಇತರರಿಗೆ ಇಬ್ಬರಿಗೂ ಗಮನಾರ್ಹವಾದದ್ದು ಆಗಿದೆ.

ಆದರೆ ನಾವು ಅಲ್ಪ ಫಲಗಳನ್ನು ಕೊಡುವದು ಯೇಸುವಿಗೆ ಬೇಕಿಲ್ಲ ಎಂಬುದು ಗಮನಾರ್ಹವಾದ ಅಂಶವಾಗಿದೆ. ಈ ಪರಿಚ್ಛೇದದಲ್ಲಿ ಇರುವ ಫಲ ಕೊಡುವ ನಾಲ್ಕು

ಅಂಶಗಗಳನ್ನು ಗಮನಿಸಿರಿ: (1) *ಹಣ್ಣಿಲ್ಲದಿರುವಿಕೆ:* "ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದುಹಾಕುತ್ತಾನೆ ..." (ವಚನ 2). (2) *ಫಲ:* "ಫಲಕೊಡುವ ಪ್ರತಿಯೊಂದು ಕೊಂಬೆಯನ್ನು ... ಶುದ್ಧಿಮಾಡುತ್ತಾನೆ" (ವಚನ 2). (3) *ಹೆಚ್ಚು ಫಲ:* "... ಅದು ಹೆಚ್ಚು ಫಲ ಕೊಡುವ ಹಾಗೆ ..." (ವಚನ 5). "ನೀವು ಬಹಳ ಫಲ ಕೊಡವುದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು; ಮತ್ತು ನನ್ನ ಶಿಷ್ಯರಾಗುವಿರಿ" (ವಚನ 8). ಈ ದರ್ಜೆಗಳಲ್ಲಿ ನಾವು ಎಲ್ಲಿದ್ದೇವೆ? "ನಾಲ್ಕನೆಯ ಅಂಶವನ್ನು" ತಲುಪಲು ನಾವು ಶ್ರೇಷ್ಟವಾದದ್ದನ್ನು ಮಾುವತನಕ ಕರ್ತನು ಸಂಪೂರ್ಣವಾಗಿ ಸಂತೃಪ್ತಗೊಳ್ಳನು.

ಹೆಚ್ಚು ಫಲಗಳನ್ನು ಪಡೆಯಲು ಕರ್ತನು ನಮ್ಮನ್ನು ಹೇಗೆ ಸಮರ್ಥರನ್ನಾಗಿಸುತ್ತಾನೆ? ಯೋಹಾನ 15:2 ಹೇಳುವಂತೆ, "... ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದುಹಾಕುತ್ತಾನೆ ಫಲಕೊಡುವ ಪ್ರತಿಯೊಂದು ಕೊಂಬೆಯನ್ನು ಅದು ಹೆಚ್ಚು ಫಲ ಕೊಡುವ ಹಾಗೆ ಶುದ್ಧಿ ಮಾಡುತ್ತಾನೆ". ಆತನು ಅದನ್ನು ಶುದ್ಧಿ ಮಾಡುವನು! ಅದು ನೋವು ದಾಯಕವಾಗಿರಬಹುದು! ನೀನು ಹೆಚ್ಚಿನ ಫಲವನ್ನು ಕೊಡಲು ನಿನ್ನನ್ನು ಶುದಿಧಗೊಳಿಸುವ ದೇವರ ಮಾರ್ಗದಲ್ಲಿರುವಾಗ ಕೆಲ ಸಂಗತಿಗಳು ಸಂಭವಿಸಬಹುದು. ಕಳೆದುಕೊಳ್ಳುವಿಕೆ, ಅನಾರೋಗ್ಯ, ನೈರಾಶೆ, ಇವುಗಳು ನಾವು ಹೆಚ್ಚು ಫಲಕೊಡುವಲ್ಲಿ ಸಹಾಯಿಸುವ ದೇವರ ಮಾರ್ಗಗಳಾಗಿರಬಹುದು.

## ಕ್ರಿಸ್ತನೊಡನೆಯ ನಮ್ಮ ಹತ್ತಿರದ ಸಂಬಂಧದ ಪರಿಣಾಮಗಳು

ನಾವು "ಕ್ರಿಸ್ತನಲ್ಲಿ ನೆಲೆಗೊಂಡಿದ್ದಾದರೆ" ಅದರ ಪರಿಣಾಮವೇನು? (1) ನಾವು ಹೆಚ್ಚು ಫಲಕೊಡುವವರಾಗಿರುತ್ತೇವೆ ಎಂದ ಯೇಸು ಹೇಳುತ್ತಾನೆ (ಯೋಹಾನ 15:5). (2) ನಾವು ಏನನ್ನು ಕೇಳಿದ್ದೇವೆಯೋ ಅದನ್ನು ಹೊಂದಿದ್ದೇವೆ, "ನೀವು ನನ್ನಲ್ಲಿಯೂ ನನ್ನ ವಾಕ್ಯಗಳಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ. ಅದು ನಿಮಗೆ ನಿಮಗೆ ದೊರೆಯುವದು" (ಯೋಹಾನ 15:7) (3) ದೇವರು ಮಹಿಮೆ ಹೊಂದುವನು: "ನೀವು ಬಹಳ ಫಲಕೊಡುವುದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು; ಮತ್ತು ನನ್ನ ಶಿಷ್ಯರಾಗುವಿರಿ" (ಯೋಹಾನ 15:8). (4) ನಾವು ಕ್ರಿಸ್ತನ ಪ್ರೀತಿಯಲ್ಲಿ ನೆಲೆಗೊಳ್ಳುವೆವು (ಯೋಹಾನ 15:10). ಕ್ರಿಸ್ತನು ಎಲ್ಲರನ್ನು ಪ್ರೀತಿಸುತ್ತಾನೆ, ಆದರೆ ಕ್ರಿಸ್ತನ ಆಜ್ಞೆಗಳನ್ನು ಕೈಕೊಂಡು ನಡೆಯುವವರಿಗೆ ಇನ್ನೂ ಆತನಿಗೆ ಹತ್ತಿರವಾಗಿದ್ದು ನಿರಂತರವಾಗಿ ಆತನ ಪ್ರೀತಿಯ ಲಾಭವನ್ನು ಪಡೆಯುವವರಿಗೆ ಮಾತ್ರ ಸಾಧ್ಯ. (5) ನಮ್ಮ ಸಂತೋಷವು ಸಂಪೂರ್ಣವಾಗಿದೆ. ಯೇಸು ಈ ಪರಿಚ್ಛೇದವನ್ನು ಸಮಾಪ್ತಿಗೊಳಿಸುತ್ತಾ "ನನ್ನಲ್ಲಿರುವ ಆನಂದವು ನಿಮ್ಮಲ್ಲಿಯೂ ಇರಬೇಕೆಂತಲೂ ನಿಮ್ಮ ಆನಂದವು ಪರಿಪೂರ್ಣವಾಗ ಬೇಕೆಂತಲೂ ಇದನ್ನೆಲ್ಲಾ ಹೇಳಿದ್ದೇನೆ" (ಯೋಹಾನ 15:11) ಎಂದು ಹೇಳುತ್ತಾನೆ. ನಾವು ಸಂತೋಷವಾಗಿರುವುದನ್ನು ಯೇಸು ಬಯಸುವವನಾಗಿದ್ದಾನೆ. ನಾವು ಹೇಗಿರಬಹುದು? ಕ್ರಿಸ್ತನೊಡನೆ ನಮ್ಮ ಸಂಬಂಧವನ್ನು ಕಾದುಕೊಳ್ಳುವುದರ ಮೂಲಕವೇ! ನಾವು ಇನ್ನೂ ಕ್ರಿಸ್ತನಿಗೆ ಹತ್ತಿರವಾಗಿರುವುದರಿಂದ ನಾವು ಫಲಪ್ರದವಾಗುತ್ತವೆ, ನಾವು ಏನನ್ನು ಕೇಳುತ್ತೇವೆಯೋ ಅದನ್ನು ಹೊಂದುತ್ತೇವೆ, ನಾವು ದೇವರನ್ನು ಮಹಿಮೆಪಡಿಸುವವರಾಗುತ್ತೇವೆ. ನಾವು ಇನ್ನೂ ಕ್ರಿಸ್ತನ ಪ್ರೀತಿಯಲ್ಲಿ ಉಳಿಯುವರಾಗಿದ್ದೇವೆ, ಮತ್ತು ನಾವು ಸಂತುಷ್ಟರಾಗಿರುತ್ತೇವೆ. ಕ್ರಿಸ್ತನೊಡನೆ ನಮ್ಮ ಸಂಬಂಧವನ್ನು ಕಾದುಕೊಳ್ಳುವುದರಲ್ಲಿ ವಿಫಲರಾದ ಕಾರಣ ನಾವು ಆತ್ಮೀಕತೆಯ ನಿರಾಶೆ ಯನ್ನು ಅನುಭವಿಸುತ್ತಿರಬಹುದು.

## ಮುಕ್ತಾಯ

ಕ್ರಿಸ್ತನ ಜೊತೆಯಲ್ಲಿ ಉಳಿಯುವದು ಜೀವನ ಅಥವಾ ಮರಣವನ್ನು ನಿರ್ಧರಿಸು

ವಂತದ್ದಾಗಿದೆ. ಒಬ್ಬ ಮನುಷ್ಯನು ಹೃದಯವಿಲ್ಲದೇ ಇರಬಲ್ಲನೇ? ಒಂದು ಕಾರು ಮೋಟರ ಇಲ್ಲದೇ ಓಡಬಲ್ಲನೇ? ಪೋಷಾಕಾಂಶವನ್ನು ಒದಗಿಸುವ ದ್ರಾಕ್ಷಾಬಳ್ಳಿಗೆ ಅಂಟಿಕೊಳ್ಳದೇ ಒಂದು ಕೊಂಬೆಯು ಜೀವಿಸಬಲ್ಲದೇ? ಕ್ರಿಸ್ತನಿಗೆ ಸಂಬಂಧಪಡದೇ ಯಾವೊಬ್ಬ ಕ್ರೈಸ್ತನೂ ಜೀವಿಸಲಾರನು. ಆತನು ನಮ್ಮ ಬಲದ ಮೂಲವಾಗಿದ್ದಾನೆ, ನಮ್ಮನ್ನು ಬಲಪಡಿಸುವವನೂ ಆತನೇ, ಆತ್ಮೀಕ ಅಸ್ತಿತ್ವವ ಅವಶ್ಯಕತೆಯ ಮೂಲವೂ, ನಮ್ಮ ಜೀವಿತದ ಮೂಲತ್ವನೂ ಮತ್ತು ಗುರಿಯೂ, ನಮ್ಮ ಹೃದಯವೂ ಆತನೇ ಆಗಿದ್ದಾನೆ. ಕ್ರಿಸ್ತನಿಗೆ ಹತ್ತಿರವಾಗಿ ಜೀವಿಸು! ಆತನಿಂದ ವಿಮುಖವಾಗಬೇಡ.

ಸಣ್ಣಕೆರೆಯಲ್ಲಿ ದೋಣಿಯಲ್ಲಿ ಮೀನು ಹಿಡಿಯುತ್ತಿರುವ ಹತ್ತು ಮತ್ತು ಆರು ವಯಸ್ಸಿನ ಸಹೋದರರ ಬಗೆಗೆ ಊಹಿಸಿಕೊಳ್ಳಿರಿ. ಆರು ವಯಸ್ಸಿನವನು ಮೀನನ್ನು ಹಿಡಿದನು. ಆತನ ಉತ್ಸಾಹವು ಚಿಗುರಿನಿಂತಿತು, ಹಾಗಿರುವಾಗಲೇ ದೋಣಿಯು ಮುಗುಚಿಕೊಂಡಿತು. ಆತನು ಈಜು ಸರಿಯಾಗಿ ಬರುತ್ತಿರಲಿಲ್ಲ, ಆದರೆ ಆತನು ಮುಗುಚಿಕೊಂಡ ದೋಣಿಯನ್ನು ಸರಿಪಡಿಸಲು ಮತ್ತು ಅದನ್ನು ಹಿಡಿದು ಕೊಳ್ಳಲು ಶಕ್ತನಾದನು. ಹತ್ತು ವರ್ಷದ ಹುಡುಗನು ಸಹ ದೋಣಿಯನ್ನು ಹಿಡಿದುಕೊಂಡನು. ಈಗ ಅವರು ಏನು ಮಾಡಿದನು? ಯಾವ ಸಹಾಯವೂ ಅಲಿಲ್ಲ. ದೊಡೇಡ ಹುಡುಗನು ಒಳ್ಳೆಯ ಈಜುಗಾರನಾಗಿದ್ದನು, ಮತ್ತು ದಂಡೆಯು ಕೇವಲ ನೂರು ಮೀಟರ್ ದೂರವಿತ್ತು, ಆದರೆ ಆತನು ತನ್ನ ಸಹೋದರನನ್ನು ದಡಕ್ಕೆ ನೂಕು ವಷ್ಟು ಸಮರ್ಥನಿರಲಿಲ್ಲ. ಅಂತಿಮವಾಗಿ, ತಾನು ಈಜುತ್ತಾ ದಡಕ್ಕೆ ಹೋಗಿ ಸಹಾಯವನ್ನು ಪಡೆಯಬೇಕೆಯ ನಿರ್ಧರಿಸಿದನು. ಮತ್ತು ಆತನು ಹಾಗೆಯೇ ಮಾಡಿದನು. ಆತನು ದಡವನ್ನು ಏರಿ, ತನ್ನ ಚಿಕ್ಕ ತಮ್ಮನನ್ನು ನೋಡಿದನು, ಮತ್ತು "ಹಿಡಿದುಕೊಂಡಿರು! ಅದನ್ನು ಸಡಿಲು ಮಾಡಬೇಡ" ಎಂದು ಕೂಗಿದನು ನಂತರ ಆತನು ತನಗೆಷ್ಟು ಸಾಧ್ಯವೂ ಅಷ್ಟು ಜೋರಾಗಿ ಓಡಿ ಹೋಗಿ ಜನರನ್ನ ಹುಡುಕಿದನು. ಹತ್ತು ನಿಮಿಷಗಳ ನಂತರ ಆತನು ತನ್ನ ತಮ್ಮನನ್ನು ಸುರಕ್ಷಿತವಾಗಿ ಹಿಂದಕ್ಕೆ ತರಬಲ್ಲಂತ ಅನೇಕ ಜನರೊಡನೆ ಹಿಂತಿರುಗಿದನು ಅದರ ಆ ಹುಡುಗನ ಸುಳಿವೇ ಅಲ್ಲಿ ಇರಲಿಲ್ಲ. ಆತನು ಸುಸ್ತಾನಾಗಿದ್ದನು, ಆತನು ಹಗ್ಗವನ್ನು ಸಡಿಲುಮಾಡಿದ್ದನು, ಮತ್ತು ಆತನು ಕಳೆದು ಹೋಗಿದ್ದನು, ಆ ಕೆರೆಯ ರಾಡಿನೀರಲ್ಲಿ ಮುಳುಗಿಹೋಗಿದ್ದನು.

ಆತನು ಸಡಿಲುಬಿಟ್ಟದ್ದು ಆತನನ್ನು ನಾಷನಕ್ಕೆ ನಡಿಸಿತು. ಕ್ರೈಸ್ತರಿಗೋ, ಕ್ರಿಸ್ತನ ಸಬಂಧದಿಂದ ಸಡಿಲುಬೀಳುವಿಕೆಯು ಅವರ ನಾಶನವಾಗಿದೆ. ನೀವು ಕ್ರಿಸ್ತನಲ್ಲಿ ಇರದೇ ಹೋದರೆ ಆತನೊಂದಿಗೆ ಹತ್ತಿರವಾದ ಅನ್ಯೋನ್ಯತೆಯ ಹತ್ತಿರವಾದ ಅನ್ಯೋನ್ಯತೆಯ ಅನುಭವವನ್ನು ಇಂದೇ ಆರಂಭಿಸಿರಿ: ಆಗ ದ್ರಾಕ್ಷೆಯು ಬಳ್ಳಿಯಗೆ ಕೊಂಬೆಯು ಅಂಟಿರುವ ಹಾಗೆ ನೀವೂ ಕೂಡ ಕ್ರಿಸ್ತನಿಗೆ ಹತ್ತಿರವಾಗಿ ಇರುವಿರಿ.

---

ಟಿಪ್ಪಣಿ

[1]Rue Porter, *Christian Worker,* 10 January 1951.